समुद्री उत्पाद निर्यात विकास प्राधिकरण
(वाणिज्य एवं उद्योग मंत्रालय, भारत सरकार)
एम पी ई डी ए भवन, पनंपिल्ली एवन्यू
डाक पेटी सं. 4272, कौच्ची-682036, भारत

**The Marine Products Export Development Authority**

(Ministry of Commerce & Industry, Govt. of India)
MPEDA House, Panampilly Avenue
P.B. No. 4272, Kochi-682 036, India

फोन Phone : 2311979, 2311901, 2311854, 2311803, 2313415, 2314468, 2315065

फैक्स Fax : 91-484-2313361

E-mail : ho@mpeda.gov.in
Website : www.mpeda.com

**ಪತ್ರಿಕಾ ಪ್ರಕಟಣೆಗಾಗಿ**

## ಶಾಲಾ ವಿದ್ಯಾರ್ಥಿಗಳಿಗಾಗಿ ಮೀನುಗಾರಿಕೆಯ ಕುರಿತು ರಾಷ್ಟ್ರೀಯ ಮಟ್ಟದ ರಸಪ್ರಶ್ನೆ ಸ್ಪರ್ಧೆ

***ಸಾಗರೋತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಕರ್ನಾಟಕ ಸೇರಿದಂತೆ 9 ಕರಾವಳಿ ರಾಜ್ಯಗಳಲ್ಲಿ 'ಮೆರೀನ್ ಕ್ವೆಸ್ಟ್ 2017' ಪ್ರಾದೇಶಿಕ ಸ್ಪರ್ಧೆ ಹಾಗು ಕೇರಳದಲ್ಲಿ ಅಂತಿಮ ಸುತ್ತಿನ ಸ್ಪರ್ಧೆ ಆಯೋಜನೆ***

**ಮಂಗಳೂರು, ಮಾ. 10:** ಮಾನವನ ಜೀವನದಲ್ಲಿ ಮೀನು ಮತ್ತು ಮೀನುಗಾರಿಕೆ ಉತ್ಪನ್ನಗಳ ಪ್ರಾಮುಖ್ಯತೆಯ ಬಗ್ಗೆ ಮಕ್ಕಳಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಸಾಗರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರ (MPEDA) ದೇಶದ ಕರಾವಳಿಯಾದ್ಯಂತ ಇರುವ ರಾಜ್ಯಗಳ ಶಾಲಾ ವಿದ್ಯಾರ್ಥಿಗಳಿಗೆ ರಾಷ್ಟ್ರೀಯ ಮಟ್ಟದ ರಸಪ್ರಶ್ನೆ ಸ್ಪರ್ಧೆ 'ಮರೀನ್ ಕ್ವೆಸ್ಟ್ 2017' ಆಯೋಜಿಸಿದೆ.

ಕರ್ನಾಟಕ ರಾಜ್ಯದಲ್ಲಿನ ಪ್ರಾದೇಶಿಕ ಸುತ್ತಿನ ಸ್ಪರ್ಧೆಯು 12 ಆಗಸ್ಟ್ 2017ರ ಶನಿವಾರದಂದು ನಡೆಯಲಿದೆ. ಕೇರಳ, ಗುಜರಾತ್, ಗೋವಾ, ಮಹಾರಾಷ್ಟ್ರ, ತಮಿಳುನಾಡು, ಆಂಧ್ರಪ್ರದೇಶ, ಒಡಿಶಾ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ ಆಯಾ ರಾಜ್ಯಗಳ ಪ್ರಾದೇಶಿಕ ಸುತ್ತುಗಳು ನಡೆಯಲಿದೆ.

ಪ್ರಾದೇಶಿಕ ಸುತ್ತುಗಳ ವಿಜೇತ ತಂಡಗಳು ಆಗಸ್ಟ್ 24 ರಂದು ಕೇರಳದ ಕೊಚ್ಚಿಯಲ್ಲಿ ಆಯೋಜಿಸಲಾಗುವ ಅಂತಿಮ ಸುತ್ತಿನಲ್ಲಿ ಸ್ಪರ್ಧಿಸಲಿವೆ. ಈ ಸ್ಪರ್ಧೆಯಲ್ಲಿ ಭಾಗವಹಿಸಲು VIII ರಿಂದ XII ತರಗತಿಗಳ ಎಲ್ಲಾ ಶೈಕ್ಷಣಿಕ ಮಂಡಳಿಗಳ (ರಾಜ್ಯ / ಸಿಬಿಎಸ್ಇ / ಐಸಿಎಸ್ಇ) ವಿದ್ಯಾರ್ಥಿಗಳಿಗೆ ಅವಕಾಶವಿದೆ.

"ನಾವು ಒಂಬತ್ತು ಕರಾವಳಿ ರಾಜ್ಯಗಳಲ್ಲಿ ಪ್ರಾದೇಶಿಕ ಮಟ್ಟದ ಸ್ಪರ್ಧೆಯನ್ನು ಆಯೋಜಿಸುತ್ತೇವೆ. ಈ ಬಾರಿಯ ಆಯೋಜನೆಯು ನಾಲ್ಕನೇ ಆವೃತ್ತಿಯಾಗಿದ್ದು, ನಮ್ಮ ರಾಷ್ಟ್ರೀಯ ಆರ್ಥಿಕತೆಗೆ ಸಾಗರ ಉತ್ಪನ್ನಗಳ ರಫ್ತಿನ ಕೊಡುಗೆಗಳ ಬಗ್ಗೆ ಮಕ್ಕಳಿಗೆ ಅರಿವು ಮೂಡಿಸುವುದು ಈ ಸ್ಪರ್ಧೆಯ ಪ್ರಮುಖ ದ್ದೇಶವಾಗಿದೆ" ಎಂದು ಸಾಗರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರ (MPEDA)ದ ಅಧ್ಯಕ್ಷರಾದ ಡಾ. ಎ. ಜಯತಿಲಕ್ ತಿಳಿಸಿದರು.

"ಮೆರೀನ್ ಕ್ವೆಸ್ಟ್ 2017" ಅಂತಿಮ ಸುತ್ತಿನ ವಿಜೇತ ತಂಡವು ರೂ.25,000 ನಗದು ಪ್ರಶಸ್ತಿಯನ್ನು, ಎರಡನೇ ಮತ್ತು ಮೂರನೇ ಸ್ಥಾನ ಪಡೆಯುವ ತಂಡಗಳು ಕ್ರಮವಾಗಿ ರೂ 15,000 ಮತ್ತು 5,000 ರೂ. ನಗದು ಪ್ರಶಸ್ತಿಯನ್ನು ತಮ್ಮದಾಗಿಸಿ ಕೊಳ್ಳಲಿವೆ.

"ಸ್ಪರ್ಧೆಗಳಲ್ಲಿನ ಸುಮಾರು ಶೇ.60 ಪ್ರಶ್ನೆಗಳು ನೇರವಾಗಿ ಮೀನುಗಾರಿಕೆ ವಲಯಕ್ಕೆ ಸಂಬಂಧಿಸಿರುತ್ತವೆ ಮತ್ತು ಉಳಿದವುಗಳು ಸಾಮಾನ್ಯವಾಗಿ ಸಾಮಾನ್ಯ ಜ್ಞಾನದ ವಿಷಯದ ಕುರಿತಾಗಿರುತ್ತವೆ" ಎಂದು ಡಾ. ಎ. ಜಯತಿಲಕ್ ತಿಳಿಸಿದ್ದಾರೆ.

ಸಾಗರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರ (MPEDA)ದ ವತಿಯಿಂದ ಸೆಮಿಫೈನಲ್/ಫೈನಲ್ ಸುತ್ತುಗಳಿಗೆ ಆಯ್ಕೆಯಾಗುವ ತಂಡಗಳ ಸ್ಪಾರ್ಧಾಳುಗಳಿಗೆ ಹಾಗು ಒಬ್ಬ ಹೆಚ್ಚುವರಿ ವ್ಯಕ್ತಿಗೆ ವಸತಿ ಹಾಗು ಆಹಾರದ ವ್ಯವಸ್ಥೆ ಮಾಡಲಾಗುತ್ತದೆ. ಅಲ್ಲದೇ, ಅರ್ಹತಾ ತಂಡಗಳ ಪ್ರಯಾಣ ವೆಚ್ಚಗಳನ್ನು (3-ಟೈರ್ ಎಸಿ ಟ್ರೇನ್ ಟಿಕೆಟ್ ಶುಲ್ಕದ ವರೆಗಿನ) ಮರುಪಾವತಿ ಮಾಡಲಾಗುತ್ತದೆ ಎಂದು ತಿಳಿಸಿದ್ದಾರೆ.

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: ವಿಜಯಕುಮಾರ್ ಎರಗಲ್, ದೂರವಾಣಿ – 944515168.**